ಕಾಮಗಾರಿಗಳು ಏನಿವೆ, ಅದನ್ನು ತುಂಡು ಗುತ್ತಿಗೆಗೆ ನೀಡಲು ಅವಕಾಶ ಮಾಡಿಕೊಟ್ಟರೆ ಆದಷ್ಟು ಬೇಗ ಕೆಲಸ ಆಗುವುದಕ್ಕೆ ಸಾಧ್ಯವಾಗುತ್ತದೆ. ತಾವು ದಯಮಾಡಿ ಆ ದಿಕ್ಕಿನಲ್ಲಿ ಮಾನ್ಯ ಸಚಿವರು ಗಮನ ಕೊಡಬೇಕು.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಚಿಕ್ಕ ಪುಟ್ಟ ಕಾಮಗಾರಿಗಳನ್ನು ನಿಗಮದ ವತಿಯಿಂದ ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಆದರೆ 5 ಲಕ್ಷ ಎನ್ನುವುದು KTPP Act ನಲ್ಲಿದೆ. ಇದನ್ನು ನಾವು ಫಾಲೋ ಮಾಡಲೇಬೇಕಾಗುತ್ತದೆ.

ಶ್ರೀ ಬಿ.ವೈ. ರಾಘವೇಂದ್ರ:– ಐದು ಲಕ್ಷ ರೂ.ಗಳ ಒಳಗೆ piece work ಮಾಡುವುದಕ್ಕೆ ಅವಕಾಶವಿಲ್ಲ, ಟೆಂಡರ್ ಮಾಡಿಯೇ ಮಾಡಬೇಕಾಗುತ್ತದೆ. ದಯಮಾಡಿ relaxation ಮಾಡಿಕೊಡಬೇಕು.

ಶ್ರೀ ಎಂ.ಬಿ. ಪಾಟೀಲ್:– ನಾವು ಆ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ.

ಅಧ್ಯಕ್ಷರು:– Ok. ಮಾನ್ಯ ಗುರುಪಾದಪ್ಪ ನಾಗಮಾರಪಳ್ಳಿಯವರೆ, ತಮ್ಮ ಇನ್ನೊಂದು ಪ್ರಶ್ನೆ ಕಂದಾಯ ಸಚಿವರಿಗೆ ಇದೆ. ಅದನ್ನು ಈಗ ಕೇಳಿ.

ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯ ಅಭಿವೃದ್ಧಿ ಕಾಮಗಾರಿಗಳು

164(2702); ಡಾ॥ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್)

ಅ) ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರಕ್ಕೆ ಪ್ರತಿ ವರ್ಷ ನೀಡಿರುವ ಅನುದಾನವೆಷ್ಟು (ಎರಡು ವರ್ಷಗಳ ಮಾಹಿತಿ ನೀಡುವುದು);

ಆ) ಈ ಅನುದಾನದಿಂದ ಈ ಪ್ರಾಧಿಕಾರದ ವ್ಯಾಪ್ತಿಯಲ್ಲಿ ತೆಗೆದುಕೊಂಡಿರುವ ಅಭಿವೃದ್ಧಿ ಕಾಮಗಾರಿಗಳು ಎಷ್ಟು;

ಇ) ಇದಕ್ಕೆ ಇಲ್ಲಿಯವರೆವಿಗೆ ವೆಚ್ಚ ಮಾಡಿರುವ ಹಣವೆಷ್ಟು; ಇನ್ನೂ ಎಷ್ಟು ಕಾಮಗಾರಿಗಳು ಬಾಕಿ ಇವೆ (ಪ್ರತಿ ಕಾಮಗಾರಿಗಳಿಗೆ ಮಾಡಿರುವ ವೆಚ್ಚದ ವಿವರಗಳನ್ನು ಒದಗಿಸುವುದು);

ಈ) ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರಕ್ಕೆ ಹಣದ ಕೊರತೆಯಿಂದಾಗಿ ಅಭಿವೃದ್ಧಿ ಕಾಮಗಾರಿಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಪ್ರಾಧಿಕಾರಕ್ಕೆ ಮುಂಬರುವ ಆರ್ಥಿಕ ವರ್ಷದಲ್ಲಿ ಅಗತ್ಯವಿರುವ ಅನುದಾನವನ್ನು ಮಂಜೂರು ಮಾಡಿ ಬಿಡುಗಡೆ ಮಾಡಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ವಿ. ಶ್ರೀನಿವಾಸಪ್ರಸಾದ್ (ಕಂದಾಯ ಸಚಿವರು)

ಅ)

ವರ್ಷ	ಆಯವ್ಯಯದಲ್ಲಿ ಒದಗಿಸಿದ ಅನುದಾನ (₹ ಲಕ್ಷಗಳಲ್ಲಿ)	ಬಿಡುಗಡೆ ಮಾಡಿದ ಮೊತ್ತ (₹ ಲಕ್ಷಗಳಲ್ಲಿ)
2013–14	500.00	300.00
2014–15	500.00	375.00

ಆ) 1) 2013–14 ನೇ ಸಾಲಿನಲ್ಲಿ 19 ಕಾಮಗಾರಿಗಳು.

2) 2014–15 ಸಾಲಿನಲ್ಲಿ 33 ಕಾಮಗಾರಿಗಳು

ಇ) ಇಲ್ಲಿಯವರೆಗೆ ಒಟ್ಟು ₹ 550.50 ಲಕ್ಷಗಳು ಖರ್ಚಾಗಿದ್ದು, ಪ್ರಸ್ತುತ 22 ಕಾಮಗಾರಿಗಳು ಬಾಕಿ ಇರುತ್ತವೆ.

ಪ್ರತಿ ಕಾಮಗಾರಿಗಳಿಗೆ ಮಾಡಿದ ವೆಚ್ಚದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಹಣದ ಕೊರತೆಯಿಂದಾಗಿ ಕಾಮಗಾರಿಗಳು ಸ್ಥಗಿತಗೊಂಡಿರುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಅನುಬಂಧ

ಬಸವಕಲ್ಯಾಣ ಅಭಿವೃದ್ಧಿ ಮಂಡಳಿಯ 2013–14ನೇ ಸಾಲಿನ ಕಾಮಗಾರಿಗಳ ವಿವರ

ಕ್ರ.ಸಂ.	ಪೂರ್ಣಗೊಂಡ ಕಾಮಗಾರಿ ವಿವರ	ಖರ್ಚು (ಲಕ್ಷಗಳಲ್ಲಿ)
1	ಅಂಬಿಗರ ಚೌಡಯ್ಯ ಸ್ಮಾರಕದಲ್ಲಿ ಮೆಕ್ಯಾನಿಕಲ್ ಇರಿಗೇಶನ್ ಮತ್ತು ಸ್ಪ್ರಿಂಕ್ಲರ ಸಿಸ್ಟಮ ಅಳವಡಿಸುವುದು.	0.71
2	ಮಡಿವಾಳ ಮಾಚಿದೇವರ ಸ್ಮಾರಕದಲ್ಲಿ ಎಂಟ್ರೇನ್ಸ್ ಆರ್ಚ ಮತ್ತು ಚೈನಿಲಿಂಕ ಫೆನ್ಸಿಂಗ ನಿರ್ಮಾಣ	1.21
3	ತ್ರಿಪುರಾಂತಕೇಶ್ವರ ಕೆರೆಯ ಅನುಭವ ಮಂಟಪ ಸಮೀಪ ಬೋಟ ಜೆಟ್ಟಿ ನಿರ್ಮಾಣ	2.34
4	ಅಕ್ಕನಾಗಮ್ಮ ಗುಡಿಯಲ್ಲಿ ಫ್ಲೋರಿಂಗ ಮತ್ತು ಗ್ರಿಲ್ ವರ್ಕ	1.06
5	ಬಂದವರ ಓಣಿ ಪ್ರಾವೇಶದಲ್ಲಿ ಶಳ್ಳಿಕೇರಿ ಕಪ್ಪು ಕಲ್ಲಿನ ಆನೆ ಮೂರ್ತಿ ಸರಬರಾಜು ಮಾಡಿ ಕೂಡಿಸುವುದು (ಗಜಲಕ್ಷ್ಮೀ)	7.10
6	ಮಡಿವಾಳ ಮಾಚಿದೇವರ ಸ್ಮಾರಕ ನಿರ್ಮಾಣ	10.75
7	ಮಂಡಳಿಯ ಉದ್ಯಾನವನಗಳಲ್ಲಿ ಶರಣರ ವಚನಗಳನ್ನು ಪ್ರದರ್ಶನಕ್ಕಾಗಿ ಕಲ್ಲಿನ ಹಲಗೆ ಸರಬರಾಜು ಮತ್ತು ಅಳವಡಿಕೆ	12.00

8	ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ಅತಿಥಿಗೃಹಕ್ಕೆ 8 ಟಿ.ವ್ಹಿ. ಹಾಗೂ ಸ್ಟಾಬಿಲೈಜರ ಸರಬರಾಜು ಮತ್ತು ಅಳವಡಿಕೆ	3.00
9	ಮಡಿವಾಳ ಮಾಚಿದೇವರ ಸ್ಮಾರಕ ಸುತ್ತಲು ಪಾತವೇ ನಿರ್ಮಾಣ	4.00
10	ಹರಳಯ್ಯ ಸ್ಮಾರಕದಲ್ಲಿ ಓಪನ ಏರ ಥೇಟರ ನಿರ್ಮಾಣ	2.00
11	ಹರಳಯ್ಯ ಸ್ಮಾರಕದಲ್ಲಿ ಕೇರ ಟೇಕರ ಯುನಿಟ್‌ಗೆ ಪೇಂಟ ಮಾಡುವುದು ಕುಡಿಯುವ ನೀರಿನ ಪೈಪಲೈನ ಅಳವಡಿಸುವುದು. ಪಾಥವೇ ನಿರ್ಮಾಣ	1.00
12	ಮಂಡಳಿ ಉದ್ಯಾನವನಗಳಲ್ಲಿ ಅಳವಡಿಸಲು ಎಂ.ಎಸ್. ಬೆಂಚಗಳ ಸರಬರಾಜು ಮತ್ತು ಅಳವಡಿಕೆ	4.70
13	ಬಸವಕಲ್ಯಾಣ ಅಭಿವೃದ್ಧಿ ಮಂಡಳಿ ವಿವಿಧ ಉದ್ಯಾನ ವನಗಳಲ್ಲಿ ಮಕ್ಕಳ ಆಟದ ಸಾಮಗ್ರಿಗಳನ್ನು ಸರಬರಾಜು ಮಾಡಿ ಅಳವಡಿಸುವುದು.	17.80
14	ಅತಿಥಿಗೃಹಕ್ಕೆ ಸೋಲಾರ ವಾಟರ ಹೀಟರ ಪೈಪಲೈನ ಅಳವಡಿಸುವುದು	0.52
15	ಅತಿಥಿ ಗೃಹಕ್ಕೆ ಸೋಲಾರ ವಾಟರ ಹೀಟರ ಸಿಸ್ಟಮ ಸರಬರಾಜು ಮಾಡಿ ಕೂಡಿಸುವುದು	1.11
16	ಎರಡೂ ಯಾತ್ರಿ ನಿವಾಸಗಳಿಗೆ ಸೋಲಾರ ವಾಟರ ಹೀಟರ ಪೈಪಲೈನ ಅಳವಡಿಸುವುದು	1.79
17	ಎರಡೂ ಯಾತ್ರಿ ನಿವಾಸಗಳಿಗೆ ಸೋಲಾರ ವಾಟರ ಹೀಟರ ಸಿಸ್ಟಮ ಅಳವಡಿಸುವುದು	6.39
18	ಪ್ರಭು ದೇವರ ಗದ್ದುಗೆ ಮಠದಲ್ಲಿ ಶೌಚಾಲಯ ನಿರ್ಮಾಣ	2.58

	ಪ್ರಗತಿ ಹಂತದಲ್ಲಿರುವ ಕಾಮಗಾರಿ ವಿವರ	
19	ಸಭಾ ಭವನ ನಿರ್ಮಾಣ (ಮುಂದುವರೆದ ಕಾಮಗಾರಿ)	160.96
	ಒಟ್ಟು	241.02
	2014–15ನೇ ಸಾಲಿನ ಪೂರ್ಣಗೊಂಡ ಕಾಮಗಾರಿಗಳ ವಿವರ	
1	ಕೆರೆ ಹತ್ತಿರದ ಯಾತ್ರಿ ನಿವಾಸದಲ್ಲಿ UPS ಮತ್ತು Projector ಗಾಗಿ ವೈರಿಂಗ ಕೆಲಸ	0.34
2	ಕೆರೆ ಹತ್ತಿರದ ಯಾತ್ರಿ ನಿವಾಸದ ಕಿಟಕಿಗಳಿಗೆ ಪರದೆ ರಾಡ ಹಾಕುವುದು ಮತ್ತು ರಿಪೇರಿ ಕೆಲಸ	0.99
3	ಅಂಬಿಗರ ಚೌಡಯ್ಯ ಸ್ಮಾರಕ ಆವರಣದಲ್ಲಿ ಶೌಚಾಲಯ ಕೆಲಸ.	4.64
4	ಕೆರೆ ಹತ್ತಿರದ ಯಾತ್ರಿ ನಿವಾಸದಲ್ಲಿ ಬಣ್ಣ ಹಚ್ಚುವುದು	0.67
5	ಕೆರೆ ಹತ್ತಿರದ ಯಾತ್ರಿ ನಿವಾಸಕ್ಕೆ ಕಿಟಕಿ ಮತ್ತು ಬಾಗಿಲಗಳಿಗೆ ಪಾಲಿಶಿಂಗ ಕೆಲಸ	0.80
6	ವಿವಿಧ ಸ್ಮಾರಕಗಳ ಉದ್ಯಾನವನಗಳಲ್ಲಿ ಕೂಡುವ ಆಸನಗಳನ್ನು ಅಳವಡಿಸಲು	1.00
7	ಅಧಿಕಾರಿಗಳ ವಸತಿ ಗೃಹಗಳಿಗೆ ಸೊಳ್ಳೆ ಪರದೆ ಅಳವಡಿಕೆ	1.50
8	ಸಿಬ್ಬಂದಿಗಳ ವಸತಿ ಗೃಹಗಳಿಗೆ ಸೊಳ್ಳೆ ಪರದೆ ಅಳವಡಿಸುವುದು	2.00

9	ಮಕ್ಕಳ ಉದ್ಯಾನ ವನ ಮತ್ತು ಬಂದವರ ಓಣಿಯಲ್ಲಿ M.S ಗೇಟ್ ಬೊರ್ಡ್ ಅಳವಡಿಸುವುದು	0.91
10	ಮಂಡಳಿಯ ಕಛೇರಿಗೆ ಯು.ಪಿ.ಎಸ್. ಸಿಸ್ಟಮ್ ಮತ್ತು ವೈರಿಂಗ ಕೆಲಸ	1.50
11	ಮಕ್ಕಳ ಉದ್ಯಾನವನದಲ್ಲಿ ಹಾಗೂ ಸಿಬ್ಬಂದಿ ವಸತಿ ಗೃಹ ಆವರಣದಲ್ಲಿ ಮಕ್ಕಳಿಗೆ ಆಟ ಆಡುವ ಸಾಮಗ್ರಿಗಳನ್ನು ಅಳವಡಿಸುವ ಕೆಲಸ	0.50
12	ವಿವಿಧ ತಾಣಗಳಲ್ಲಿ ಹಾಗೂ ಕೆರೆ ಬಂಡ ಹಾಳಾಗಿದ್ದನ್ನು ಜೆಸಿಬಿ ಮತ್ತು ಟಿಪ್ಪರಗಳನ್ನು ಬಳಸಿ ರಿಪೇರಿ ಮಾಡುವ ಕೆಲಸ	1.00
	ಪ್ರಗತಿಯಲ್ಲಿರುವ ಕಾಮಗಾರಿಗಳ ವಿವರ	
1	ಸಭಾ ಭವನದ ಮೂರು ದ್ವಾರಗಳಲ್ಲಿ ಶರಣರ 6' ಎತ್ತರ 3 ಮೂರ್ತಿಗಳ ಸ್ಥಾಪನೆ	2.10
2	ಸಭಾ ಭವನ (ಮುಂದುವರೆದ ಕಾಮಗಾರಿಯಾಗಿದ್ದು, ಮುಕ್ತಾಯದ ಹಂತದಲ್ಲಿರುತ್ತದೆ)	205.00
3	ಬಂದವರ ಓಣಿ ಗವಿಯ ನವಿನಿಕರಣ ಹಾಗೂ ಚೈನಲಿಂಕ ಫೇನ್ಸಿಂಗಗೆ ಗೇಟ್ ಅಳವಡಿಸುವುದು	2.60
4	ಬಂದವರ ಓಣಿಯಲ್ಲಿ ತೆರೆದ ಬಾವಿಯ ಹುಳೇತ್ತುವುದು ಮತ್ತು ಭದ್ರತೆ ಗೋಡೆ ಕೆಲಸ	5.00
5	ಬಂದವರ ಓಣಿಯಲ್ಲಿ ಸರ್ಕ್ಯೂಲರ ಪ್ಲಾಸಾ ಸುತ್ತ ಟೆರೆಸ ಗೋಡೆ ಮತ್ತು ಕೂಡುವ ಆಸನಗಳ ಕೆಲಸ	7.00

6	ಬಂದವರ ಓಣಿಯಲ್ಲಿ ಪೈಪ ಸಿ.ಡಿ. ಕೆಲಸ	2.00
7	ವೀರಗೊಲ್ಲಾಳೇಶ್ವರ ಗವಿಗೆ ಹೋಗಲು ಸಿಮೆಂಟ ರಸ್ತೆ ನಿರ್ಮಾಣ ಕೆಲಸ	3.00
8	ಬೋಟ ಜೆಟ್ಟಿಗೆ ಹೋಗಲು ಮಕ್ಕಳ ಉದ್ಯಾನವನದಲ್ಲಿ ಅಪ್ರೋಚ ರಸ್ತೆ ಕೆಲಸ	1.00
9	ನೂಲಿ ಚಂದಯ್ಯ ಗವಿ ಆವರಣದಲ್ಲಿ ತೆರೆದ ಬಾವಿಗೆ ಗ್ರೀಲ್, ಚರಂಡಿ ಹಾಗೂ ಪಿಚಿಂಗ ಕೆಲಸ	5.00
10	ಅಂಬಿಗರ ಚೌಡಯ್ಯ ಸ್ಮಾರಕದಲ್ಲಿ ಶೌಚಾಲಯಕ್ಕೆ ಅಪ್ರೋಚ ರಸ್ತೆ ಕೆಲಸ	1.00
11	ಮಡಿವಾಳ ಮಾಚಿದೇವರ ಸ್ಮಾರಕಕ್ಕೆ ವಿದ್ಯುತ್ ಜೋಡಣೆ ಎಚ್.ಟಿ. ಮತ್ತು ಎಲ್.ಟಿ. ಲೈನ ಕೆಲಸ	14.85
12	ಕೆರೆ ಹತ್ತಿರದ ಯಾತ್ರಿ ನಿವಾಸಕ್ಕೆ ವಿದ್ಯುತ್ ಪೂರೈಕೆ ಮಾಡುವುದು ಮತ್ತು ಡಿ.ಜಿ. ಸೆಟ್ ಅಳವಡಿಸುವುದು	6.75
13	ಬಸವೇಶ್ವರ ದೇವಸ್ಥಾನದ ಹತ್ತಿರದ ಯಾತ್ರಿ ನಿವಾಸಕ್ಕೆ ವಿದ್ಯುತ್ ಪೂರೈಕೆ ಮಾಡುವುದು ಮತ್ತು ಡಿ.ಜಿ. ಸೆಟ್ ಅಳವಡಿಸುವುದು	3.80
14	ವಿವಿಧ ಸ್ಮಾರಕಗಳಲ್ಲಿ ಕಲ್ಲಿನ ಫಲಕಗಳ ಮೇಲೆ ವಚನಗಳನ್ನು ಕೊರೆಯಲು	11.25
15	ಮಹಾದ್ವಾರದ ವಿದ್ಯುದೀಕರಣ ಕೆಲಸ	8.00

16	ತ್ರಿಪುರಾಂತ ಐ.ಬಿ. ಹತ್ತಿರದ ಪ್ರವೇಶ ದ್ವಾರದ ಸ್ಥಪತಿ ಕೆಲಸ	5.00
17	ಶರಣ ಶ್ರೀ ಅಲ್ಲಮ ಪ್ರಭು ವೃತ್ತದಲ್ಲಿ ಶ್ರೀ ಅಲ್ಲಮ ಪ್ರಭು ರವರ ಸಿಮೆಂಟ ಮೂರ್ತಿ ಕೆಲಸ	1.00
18	ಮಂಡಳಿಯ ಸ್ಮಾರಕಗಳ ದಾಖಲಿಕರಣಕ್ಕಾಗಿ	2.00
19	ಸಭಾ ಭವನ ಕಟ್ಟಡಕ್ಕೆ ಹಾಗೂ BKDB ಸಭಾ ಗೃಹದ ಪ್ರವೇಶದಲ್ಲಿ Orissa sand stone ಮೂರ್ತಿಗಳನ್ನು ಕೂಡಿಸಲು	3.70
20	ಮಹಾದ್ವಾರದ ಕಂಪೌಂಡ ಗೋಡೆ ಮೇಲೆ ಶರಣರ ಚಿತ್ರಗಳನ್ನು ಬಿಡಸಲು	1.78
21	ಸಭಾ ಭವನ ಮುಖ್ಯ ಪ್ರವೇಶ ದ್ವಾರದಲ್ಲಿ 8' ಎತ್ತರದ ಕುಳಿತ ಬಸವಣ್ಣನವರ ಮೂರ್ತಿ ಸ್ಥಾಪನೆ	1.80
	ಒಟ್ಟು	309.48

ಡಾ॥ ಗುರುಪಾದಪ್ಪ ನಾಗಮಾರಪಳ್ಳಿ:– ಮಾನ್ಯ ಅಧ್ಯಕ್ಷರೆ, ಪ್ರಾಧಿಕಾರಕ್ಕೆ ಅನುದಾನವನ್ನೆಲ್ಲಾ ಕೊಟ್ಟಿದ್ದಾರೆ, ಇನ್ನೂ 22 ಕಾಮಗಾರಿಗಳನ್ನು ಮಾಡುವುದಕ್ಕೆ ಆಗಿಲ್ಲವೆಂದು ಉತ್ತರ ಕೊಟ್ಟಿದ್ದಾರೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಮಾನ್ಯ ಅಧ್ಯಕ್ಷರೆ, ಮಾಡುವುದಕ್ಕೆ ಸಾಧ್ಯವಾಗಿಲ್ಲವೆಂದು ಅಲ್ಲ, 2013–14ನೇ ಸಾಲಿನಲ್ಲಿ 19 ಕಾಮಗಾರಿಗಳು ಮತ್ತು 2014–15ನೇ ಸಾಲಿನಲ್ಲಿ 33 ಕಾಮಗಾರಿಗಳು ಇವೆ. ತಾವು ಮೂರನೇ ಪ್ರಶ್ನೆ ಇಲ್ಲಿಯವರೆಗೆ ವೆಚ್ಚ ಮಾಡಿರುವ ಹಣವೆಷ್ಟು? ಇನ್ನೂ ಎಷ್ಟ ಕಾಮಗಾರಿಗಳು ಬಾಕಿ ಇವೆ? ಕಾಮಗಾರಿಗಳಿಗೆ ಮಾಡಿರುವ ವೆಚ್ಚದ ವಿವರಗಳನ್ನು ಒದಗಿಸುವುದೆಂದು ಕೇಳಿದ್ದೀರಿ. ಪ್ರತಿ ವರ್ಷ ಕಾಮಗಾರಿಗಳಿಗೆ ಮಾಡಿದ ವೆಚ್ಚದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಇನ್ನೂ 22 ಕಾಮಗಾರಿಗಳು ಬಾಕಿ ಇದೆ ಎಂದು ಹೇಳಿದ್ದೇವೆ. ಅದನ್ನು ಪೂರ್ಣಗೊಳಿಸಿ ಕೊಡುತ್ತೇವೆ, ಮತ್ತೆ ಇದಕ್ಕೆ ಹಣದ ಕೊರತೆ ಇಲ್ಲವೆಂದು ಹೇಳಿದ್ದೇವೆ, ಅದನ್ನು ಮಾಡಿ ಕೊಡುತ್ತೇವೆ.

ಅಧ್ಯಕ್ಷರು:– Ok, ಮಾನ್ಯ ರವಿಯವರೆ, ತಮ್ಮ ಪ್ರಶ್ನೆ ಕೇಳಿ.